ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.
E-mail:Commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ: ಪಪೂಶಿಇ/ಶೈಶಾ-02/ಉ.ಉ.ಪ್ರಾ ಆ/2021-22 ದಿನಾಂಕ:3-08-2021

## ಸುತ್ತೋಲೆ

ವಿಷಯ: 2020-21ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ / ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉತ್ತಮ ಉಪನ್ಯಾಸಕರು/ಪ್ರಾಂಶುಪಾಲರ ಪ್ರಶಸ್ತಿಗಾಗಿ ಆಯ್ಕೆ ಮಾಡಲು ಅರ್ಹ ಉಪನ್ಯಾಸಕರು/ಪ್ರಾಂಶುಪಾಲರ ಪಟ್ಟಿಯನ್ನು ನೀಡುವ ಕುರಿತು.

* * *

ಪದವಿ ಪೂರ್ವ ಶಿಕ್ಷಣವು ವಿದ್ಯಾರ್ಥಿ ಜೀವನದ ಪ್ರಮುಖ ಘಟ್ಟವಾಗಿದ್ದು, ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದೆ. ರಾಜ್ಯದಲ್ಲಿ ಸುಮಾರು ಹನ್ನೆರೆಡು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಪದವಿ ಪೂರ್ವ ಹಂತದಲ್ಲಿ ವ್ಯಾಸಂಗ ಮಾಡುತ್ತಿದ್ದು, ಈ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿರುವ ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ಗುರುತಿಸಿ ಗೌರವಿಸುವ ಮೂಲಕ ಪ್ರೋತ್ಸಾಹಿಸುವುದು ಸರ್ಕಾರದ/ಇಲಾಖೆಯ ಆಶಯವಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು 2020-21ನೇ ಶೈಕ್ಷಣಿಕ ಸಾಲಿಗೆ ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಸರ್ಕಾರಿ/ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಉಪನ್ಯಾಸಕರಾಗಿ/ಉತ್ತಮ ಆಡಳಿತ ನಿರ್ವಹಿಸುತ್ತಿರುವ ಪ್ರಾಂಶುಪಾಲರಿಗೆ **"ಉತ್ತಮ ಉಪನ್ಯಾಸಕರು ಮತ್ತು ಉತ್ತಮ ಪ್ರಾಂಶುಪಾಲರು"** ಪ್ರಶಸ್ತಿಯನ್ನು ನೀಡಲು ಉದ್ದೇಶಿಸಲಾಗಿದೆ. ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಪ್ರತಿ ವರ್ಷ **"ಶಿಕ್ಷಕರ ದಿನಾಚರಣೆ"** ದಿನದಂದು ನಡೆಸಲು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ ತಮ್ಮ ಜಿಲ್ಲೆಯಿಂದ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು/ಪ್ರಾಂಶುಪಾಲರನ್ನು ಗುರುತಿಸುವ ಗುರುತರ ಜವಾಬ್ದಾರಿ ತಮ್ಮ ಮೇಲೆ ಇದೆ. ಯಾವುದೇ ಕಾರಣಕ್ಕೂ ಯಾವುದೇ ರೀತಿಯ ಸಂಶಯಗಳಿಗೆ ಅವಕಾಶ ನೀಡದೆ ಎಚ್ಚರ ವಹಿಸಿ ಈ ಕೆಳಕಂಡ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಆಯ್ಕೆ ಮಾಡಿ ಕಾಲಮಿತಿ ಒಳಗೆ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

### ಅ. ಪ್ರಾಚಾರ್ಯರ/ ಉಪನ್ಯಾಸಕರ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಸೂಚನೆಗಳು/ಮಾನದಂಡಗಳು

1. ವಿವಿಧ ಸಾಧನೆಗಳಿಗೆ ಸಂಬಂಧಿಸಿದಂತೆ ವರದಿಯನ್ನು /ದಾಖಲೆಗಳನ್ನು ಚೆಕ್‌ಲಿಸ್ಟ್‌ನಂತೆ ಲಗತ್ತಿಸಿರಬೇಕು.
2. ದಿನಾಂಕ 31-03-2021ಕ್ಕೆ ಉಪನ್ಯಾಸಕರು ಕನಿಷ್ಟ 10 ವರ್ಷಗಳ ಬೋಧನಾ ಅನುಭವ ಹೊಂದಿರಬೇಕು. ದಿನಾಂಕ 31-03-2021ಕ್ಕೆ ಕನಿಷ್ಟ 03 ವರ್ಷಗಳ ಉತ್ತಮ ಆಡಳಿತ ನಿರ್ವಹಿಸಿರುವ ಅನುಭವ ಪ್ರಾಚಾರ್ಯರದ್ದಾಗಿರಬೇಕು.

3. ಪ್ರತಿ ಜಿಲ್ಲೆಯಿಂದ ಒಬ್ಬರು ಪ್ರಾಚಾರ್ಯರನ್ನು ಹಾಗೂ ಐದು ಜನ ಉಪನ್ಯಾಸಕರನ್ನು ಆಯ್ಕೆಮಾಡಿ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಬೇಕು.

4. ಪ್ರತಿ ಜಿಲ್ಲೆಯಿಂದ ಐವರು(05) ಉತ್ತಮ ಉಪನ್ಯಾಸಕರಲ್ಲಿ ಕನ್ನಡ ಆಂಗ್ಲ ಹಾಗೂ ಇತರೆ ಭಾಷೆಗಳಿಂದ, ಕಲಾ ವಿಭಾಗ, ವಿಜ್ಞಾನ ವಿಭಾಗ ಹಾಗೂ ವಾಣಿಜ್ಯ ವಿಭಾಗಗಳಿಂದ ತಲಾ ಒಬ್ಬರಂತೆ ಆಯ್ಕೆ ಮಾಡಿ ಕಳುಹಿಸಿಕೊಡಬೇಕು.

5. ಆಯ್ಕೆಯಾದ ಪ್ರಾಚಾರ್ಯರ/ಉಪನ್ಯಾಸಕರ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಯಲ್ಲಿ ಕಳೆದ 05 ವರ್ಷಗಳಿಂದ 40 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ಹಾಜರಾಗಿ ಫಲಿತಾಂಶ ಶೇ.90 ಕ್ಕಿಂತಲೂ ಹೆಚ್ಚಿರಬೇಕು(ಎಲ್ಲಾ ಪೂರಕ ದಾಖಲೆಗಳೊಂದಿಗೆ).

6. ಹಿಂದಿನ ಯಾವುದೇ ವರ್ಷಗಳಲ್ಲಿ ಸದರಿ ಪ್ರಶಸ್ತಿ ಪಡೆದ ಪ್ರಾಚಾರ್ಯರು/ಉಪನ್ಯಾಸಕರು ಈ ಸಾಲಿನ ಪ್ರಶಸ್ತಿಗೆ ಅರ್ಹರಿರುವುದಿಲ್ಲ ಮತ್ತು ಈಗಾಗಲೇ ರಾಜ್ಯ/ರಾಷ್ಟ್ರ ಪ್ರಶಸ್ತಿ ಪಡೆದಿರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವಂತಿಲ್ಲ.

7. ಅರ್ಜಿಯೊಂದಿಗೆ ಪ್ರತ್ಯೇಕವಾಗಿ 04 ಪಾಸ್‌ಪೋರ್ಟ್ ಸೈಜಿನ ಭಾವ ಚಿತ್ರಗಳನ್ನು ಹಿಂಬದಿಯಲ್ಲಿ ಹೆಸರು ಬರೆದು ಕಡ್ಡಾಯವಾಗಿ ಸಲ್ಲಿಸಬೇಕು.

8. ಪ್ರಾಚಾರ್ಯರ/ಉಪನ್ಯಾಸಕರ ಕಾರ್ಯಕ್ಷೇತ್ರಕ್ಕೆ ಪೂರಕವಾಗಿರುವ ಮಾಹಿತಿ ಹಾಗೂ ಭಾವಚಿತ್ರಗಳನ್ನು ಮಾತ್ರ ಪರಿಗಣಿಸತಕ್ಕದ್ದು.

9. ಪ್ರಾಚಾರ್ಯರು/ಉಪನ್ಯಾಸಕರು ಯಾವುದೇ ಶಿಸ್ತು ಕ್ರಮಕ್ಕೆ ಒಳಗಾಗಿ ದಂಡನೆ ಅವಧಿಯಲ್ಲಿ ಇದ್ದಲ್ಲಿ ಅಂತಹ ಅರ್ಜಿಗಳನ್ನು ಉಪನಿರ್ದೇಶಕರು ತಿರಸ್ಕರಿಸುವುದು.

10. ಯಾವುದೇ ಶಿಫಾರಸ್ಸು ಪತ್ರಗಳನ್ನು ಪರಿಗಣಿಸುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಆಯ್ಕೆ ಸಮಿತಿ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

11. ಆಯ್ಕೆ ಮಾಡಿರುವ ಪ್ರಾಚಾರ್ಯರು/ಉಪನ್ಯಾಸಕರು ಸಮಾಜದ ಹಾಗೂ ಇಲಾಖೆಯ ಗೌರವಗಳಿಗೆ ಪಾತ್ರರಾಗಿರಬೇಕು.

12. ತರಗತಿಯಲ್ಲಿ ತಮ್ಮ ವಿಷಯದ ಬೋಧನೆಗಾಗಿ ಹಮ್ಮಿಕೊಂಡಿರುವ ಕಾರ್ಯ ಯೋಜನೆಗಳು ನೂತನ ಪ್ರಯೋಗಗಳು ಪರಿಣಾಮಕಾರಿಯಾಗಿರಬೇಕು (ಚಟುವಟಿಕೆಗಳ ಪಟ್ಟಿಯನ್ನು ಲಗತ್ತಿಸಬೇಕು)

13. ಪ್ರಾಚಾರ್ಯರು ಕಾಲೇಜು/ಸಂಸ್ಥೆಯ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವಂತಹ ಕಾರ್ಯಕ್ರಮಗಳನ್ನು ಕೈಗೊಂಡಿರಬೇಕು(ಎಲ್ಲಾ ದಾಖಲೆಗಳೊಂದಿಗೆ).

14. ಕಾಲೇಜು/ಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವಶ್ಯಕ ಪೀಠೋಪಕರಣ, ಕೊಠಡಿ ನಿರ್ಮಾಣ, ಪ್ರಯೋಗಾಲಯಗಳ ಉನ್ನತೀಕರಣ, ಗ್ರಂಥಾಲಯ ಹಾಗೂ ಪುಸ್ತಕಗಳ ಸಂಗ್ರಹ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಸಂಘ ಸಂಸ್ಥೆಗಳಿಂದ ಅಥವಾ ದಾನಿಗಳಿಂದ ಪೂರೈಸಿದ್ದರೆ ಸಂಬಂಧಿಸಿದ ಮಾಹಿತಿ (ಎಲ್ಲಾ ದಾಖಲೆಗಳೊಂದಿಗೆ) ಸಲ್ಲಿಸುವುದು.

15. ಸದರಿ ಕಾಲೇಜು/ಸಂಸ್ಥೆಯಲ್ಲಿ ಪ್ರಾಚಾರ್ಯರು /ಉಪನ್ಯಾಸಕರು ಕಳೆದ 05 ವರ್ಷಗಳಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ/ಸಾಂಸ್ಕೃತಿಕ ಹಾಗೂ ಇತರೆ ಚಟುವಟಿಕೆಗಳಲ್ಲಿನ ಸಾಧನೆ ಅದೇ ರೀತಿ ವಿದ್ಯಾರ್ಥಿಗಳನ್ನು ರಾಜ್ಯಮಟ್ಟ, ರಾಷ್ಟ್ರಮಟ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದ್ದರೆ ಮಾಹಿತಿ(ವಿದ್ಯಾರ್ಥಿಗಳು ಪಡೆದ ಪದಕ/ಪಾರಿತೋಷಕ ಮತ್ತು ಬಹುಮಾನಗಳ ದಾಖಲೆಗಳನ್ನು ವಿವರಣೆಗಳೊಂದಿಗೆ).

16. ಸಮಯ ಪಾಲನೆ ಹಾಗೂ ಮೇಲಿನ ಅಧಿಕಾರಿಗಳೊಂದಿಗೆ ಸೌಜನ್ಯತೆಯಿಂದ ನಡೆದುಕೊಳ್ಳಲಾಗುತ್ತಿದೆ ಎಂಬುದಕ್ಕೆ ತಮ್ಮ ಮೇಲಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ ನೀಡುವುದು.

17. ಸರ್ಕಾರ/ಸಂಘ ಸಂಸ್ಥೆಗಳಿಂದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ/ಧನಸಹಾಯ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುವಂತೆ ಉತ್ತೇಜನ ನೀಡಿದ್ದರೆ ದಾಖಲೆಗಳೊಂದಿಗೆ ಮಾಹಿತಿ ಸಲ್ಲಿಸುವುದು.

**ವೇಳಾಪಟ್ಟಿ**

| ಕ್ರ ಸ | ಪ್ರಕ್ರಿಯೆಯ ವಿವರ | ನಿಗದಿಪಡಿಸಿರುವ ದಿನಾಂಕ |
|---|---|---|
| 1 | ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಅಂತಿಮ ದಿನಾಂಕ | 16.08.2021 |
| 2 | ಜಿಲ್ಲಾ ಮಟ್ಟದಲ್ಲಿ ಆಯ್ಕೆಮಾಡಬೇಕಾದ ದಿನಾಂಕ | 23.08.2021 |
| 3 | ರಾಜ್ಯ ಮಟ್ಟದ ಆಯ್ಕೆಮಾಡಬೇಕಾದ ದಿನಾಂಕ | 27.08.2021 |
| 4 | ಸರ್ಕಾರಕ್ಕೆ ವರದಿ ಮಾಡುವುದು | 31.08.2021 |
| 5 | ಪ್ರಶಸ್ತಿ ವಿಜೇತರಿಗೆ ಮಾಹಿತಿ ನೀಡುವುದು | 03.09.2021 |
| 6 | ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ | 05.09.2021 |

ಮೇಲಿನ ಎಲ್ಲಾ ಸೂಚನೆ/ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು 100 ಅಂಕಗಳಿಗೆ ಮೌಲ್ಯಮಾಪನ ಮಾಡಲು ತಿಳಿಸಿದೆ. ಇದಕ್ಕಾಗಿ ಉಪನಿರ್ದೇಶಕರು ತಮ್ಮ ನೇತೃತ್ವದಲ್ಲಿ ಆಯಾ ಜಿಲ್ಲೆಯ ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಹಿರಿಯ ಇಬ್ಬರು ಪ್ರಾಂಶುಪಾಲರು ಹಾಗೂ ಇಬ್ಬರು ಹಿರಿಯ ಉಪನ್ಯಾಸಕರುಗಳನ್ನೊಳಗೊಂಡ ಸಮಿತಿಯಲ್ಲಿ ಇಬ್ಬರು ಮಹಿಳಾ ಸದಸ್ಯರನ್ನು ಹೊಂದಿರಬೇಕು, ಈ ಸಮಿತಿಯು ಜಾಗರೂಕತೆಯಿಂದ ಮೇಲೆ ಸೂಚಿಸಿರುವಂತೆ ಸಂಯೋಜನೆ/ವಿಷಯಗಳಲ್ಲಿ ತಲಾ ಒಬ್ಬರಂತೆ 05 ಉಪನ್ಯಾಸಕರನ್ನು ಹಾಗೂ ಒಬ್ಬರು ಪ್ರಾಂಶುಪಾಲರನ್ನು ನ್ಯಾಯಸಮ್ಮತವಾಗಿ ಆಯ್ಕೆ ಮಾಡಿ Short list ಪಟ್ಟಿ ಸಿದ್ಧಪಡಿಸಬೇಕು. ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಬೇಕಾದ ದಿನಾಂಕ:23.08.2021 ಆಗಿರುತ್ತದೆ. ನಿಮ್ಮ ಆಯ್ಕೆಯನ್ನು ಸಮರ್ಥಿಸಿ ಪ್ರತಿಯೊಬ್ಬ ಉತ್ತಮ ಉಪನ್ಯಾಸಕ/ಪ್ರಾಂಶುಪಾಲರ ಬಗ್ಗೆ 100 ಶಬ್ದಗಳಲ್ಲಿ ಪ್ರತ್ಯೇಕ ವರದಿಯನ್ನು ಕಡ್ಡಾಯವಾಗಿ ಪಟ್ಟಿಯ ಜೊತೆಯಲ್ಲಿ ಕಳುಹಿಸಬೇಕು.

ಯಾವುದೇ ಜಿಲ್ಲೆಯ ಸರ್ಕಾರಿ/ಅನುದಾನಿತ ಕಾಲೇಜಿನಲ್ಲಿ ಉಪನ್ಯಾಸಕರಾಗಲಿ ಹಾಗೂ ಪ್ರಾಂಶುಪಾಲರಾಗಲಿ ಪ್ರಸ್ತಾವನೆ ಸಲ್ಲಿಸದಿದ್ದ ಪಕ್ಷದಲ್ಲಿ, ಜಿಲ್ಲಾ ಉಪನಿರ್ದೇಶಕರು ಶೂನ್ಯ ವರದಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಸದರಿ ಪಟ್ಟಿಯನ್ನು ದಿನಾಂಕ:25-08-2021 ರೊಳಗೆ ಅತಿ ಜರೂರಾಗಿ ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರಿಗೆ ಖುದ್ದಾಗಿ ತಲುಪಿಸಲು ಈ ಮೂಲಕ ಸೂಚಿಸಿದೆ.

ವಿಶೇಷ ಸೂಚನೆ:-

- ❖ ಆಯಾ ಜಿಲ್ಲೆಯ ಪ್ರಾಂಶುಪಾಲರು ಮತ್ತು ಉಪನ್ಯಾಸಕರು ಪ್ರಶಸ್ತಿಗಾಗಿ ಪ್ರಸ್ತಾವನೆಯನ್ನು ಉಪ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:14.08.2021 ಆಗಿರುತ್ತದೆ.
- ❖ ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಪಟ್ಟಿಯನ್ನು ಅಂತಿಮಗೊಳಿಸಬೇಕಾದ ದಿನಾಂಕ: 23.08.2021 ಆಗಿರುತ್ತದೆ.
- ❖ ಉಪ ನಿರ್ದೇಶಕರ ಹಂತದಲ್ಲಿ ಆಯ್ಕೆ ಮಾಡಿದ ಪಟ್ಟಿಯನ್ನು ಮೂಲ ಪ್ರಸ್ತಾವನೆಯೊಂದಿಗೆ ದಿನಾಂಕ: 25-08-2021 ರೊಳಗೆ ಅತಿ ಜರೂರಾಗಿ ಜಂಟಿ ನಿರ್ದೇಶಕರು(ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12 ಇವರಿಗೆ ಖುದ್ದಾಗಿ ತಲುಪಿಸುವುದು. ವಿಳಂಬವಾಗಿ ಬಂದ ಪ್ರಸ್ತಾವನೆಗಳನ್ನು ಏಕಪಕ್ಷೀಯವಾಗಿ ತಿರಸ್ಕರಿಸಲಾಗುವುದು.
- ❖ ಉಪ ನಿರ್ದೇಶಕರು ತಮ್ಮ ವ್ಯಾಪ್ತಿಯಲ್ಲಿನ ಕಾಲೇಜುಗಳಿಗೆ ವ್ಯಾಪಕ ಪ್ರಚಾರದ ಮೂಲಕ ಮತ್ತು ಕಛೇರಿ ಸೂಚನಾ ಫಲಕದಲ್ಲಿ ಅಳವಡಿಸುವುದರ ಮೂಲಕ ಅರ್ಹರ ಗಮನಕ್ಕೆ ತರುವುದು.
- ❖ ಆಯ್ಕೆ ಸಮಿತಿಯ ತೀರ್ಮಾನಗಳು ಪ್ರಶ್ನಾರ್ಹವಲ್ಲ ಹಾಗೂ ಮಾಹಿತಿ ಹಕ್ಕಿನ (ಆರ್.ಟಿ.ಐ) ವ್ಯಾಪ್ತಿಗೂ ಒಳಪಡುವುದಿಲ್ಲ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಗಮನಕ್ಕೆ ತರಲು-ಮುಂದಿನ ಕ್ರಮಕ್ಕಾಗಿ.
2. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
3. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ-ಇವರಿಗೆ – ರಾಜ್ಯದ ಎಲ್ಲಾ 32 ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಇ-ಮೇಲ್ ಮೂಲಕ ರವಾನಿಸಲು ಹಾಗೂ ವೆಬ್ ಸೈಟ್‌ನಲ್ಲಿ ಪ್ರಕಟಿಸಲು-ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

***E-mail:Commissioner.pue@gmail.com * Ph. No.23361857, 23361858* Fax-23361852***

ಅನುಬಂಧ-1

ಉತ್ತಮ ಪ್ರಾಚಾರ್ಯರ ಹಾಗೂ ಉತ್ತಮ ಉಪನ್ಯಾಸಕ ಪ್ರಶಸ್ತಿಗಳಿಗೆ ಪ್ರಸ್ತಾವನೆ

ಭಾವ ಚಿತ್ರ

| | | |
|---|---|---|
| 1. | ಪ್ರಾಚಾರ್ಯರ/ ಉಪನ್ಯಾಸಕರ ಹೆಸರು: | |
| 2 | ಹುದ್ದೆ | |
| 3 | ವಿದ್ಯಾರ್ಹತೆ | |
| 4 | ಕೆ.ಜಿ.ಐ.ಡಿ/ಎಲ್.ಐ.ಸಿ ಸಂಖ್ಯೆ | |
| 5 | ಜನ್ಮ ದಿನಾಂಕ | |
| 6 | ಗಂಡು/ಹೆಣ್ಣು | |
| 7 | ಬೋಧನಾ ವಿಷಯ | |
| 8 | ಆಧಾರ್ ಸಂಖ್ಯೆ | |
| 9 | ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ವಿಳಾಸ | |
| 10 | ಉಪನ್ಯಾಸಕರಾಗಿ ಸೇವೆಗೆ ಸೇರಿದ ದಿನಾಂಕ ಮತ್ತು ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಒಟ್ಟು ಸೇವೆ (ದಿನಾಂಕ 31.03.2021 ರವರೆಗೆ) | |
| 11 | ಸೇವೆ ಸಲ್ಲಿಸುತ್ತಿರುವ ಬಗ್ಗೆ ಪ್ರಾಂಶುಪಾಲರು / ಉಪ ನಿರ್ದೇಶಕರಿಂದ ಪಡೆದ ದೃಢೀಕರಣ ಪತ್ರವನ್ನು ಲಗತ್ತಿಸಿದೆಯೇ ? | ಹೌದು/ಇಲ್ಲ |
| 12 | ಉಪನ್ಯಾಸಕರ/ಪ್ರಾಂಶುಪಾಲರ ವಿಳಾಸ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ. | |
| 13 | ಬ್ಯಾಂಕ್ ಖಾತೆಯ ವಿವರ | |

(ಚೆಕ್‌ಲಿಸ್ಟ್‌ನಂತೆ ಪ್ರತ್ಯೇಕವಾಗಿ ಮೂಲ ದಾಖಲೆ/ಮಾಹಿತಿಗಳನ್ನು ಲಗತ್ತಿಸಬೇಕು, ಒಮ್ಮೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ).

ಸ್ಥಳ :

ದಿನಾಂಕ:

ಪ್ರಾಚಾರ್ಯರ /ಉಪನ್ಯಾಸಕರ ಸಹಿ

# ಸೇವಾ ವಿವರ

1. ಒಟ್ಟು ಸೇವಾವಧಿ: ವರ್ಷ/ತಿಂಗಳು ದಿನಗಳು:

   1(ಎ) ಬೋಧನಾ ಕಾರ್ಯದ ಸೇವಾವಧಿ ಕಾಲೇಜು ಸೇವಾವಧಿ):

   1(ಬಿ) ಆಡಳಿತಾತ್ಮಕ ಕಾರ್ಯದ ಸೇವಾವಧಿ (ಕಾಲೇಜುಯನ್ನು ಹೊರತುಪಡಿಸಿ):–

2. ವಿದ್ಯಾರ್ಥಿ ದಾಖಲಾತಿ :

| ವರ್ಷ | ಜಿಲ್ಲೆ | ಕಾಲೇಜುಗಳ ಹೆಸರು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 2016–17 | | | |
| 2017–18 | | | |
| 2018–19 | | | |
| 2019–20 | | | |
| 2020–21 | | | |

3. ಶೈಕ್ಷಣಿಕ ಫಲಿತಾಂಶ ದ್ವಿತೀಯ ಪಿಯುಸಿ ಪರೀಕ್ಷೆ (ಕನಿಷ್ಟ 5 ವರ್ಷಗಳು)

| ವರ್ಷ | ಜಿಲ್ಲೆ | ಕಾಲೇಜುಗಳ ಹೆಸರು | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 2016–17 | | | |
| 2017–18 | | | |
| 2018–19 | | | |
| 2019–20 | | | |
| 2020–21 | | | |

4. ದೈಹಿಕ ಹಾಗೂ ವಿಶೇಷ ಶಿಕ್ಷಕರಿಗೆ,

| ವರ್ಷ | ಜಿಲ್ಲೆ | ಕಾಲೇಜುಗಳ ಹೆಸರು | ಚಟುವಟಿಕೆ / ಕ್ರೀಡೆ | | | | |
|---|---|---|---|---|---|---|---|
| | | | ತಾಲ್ಲೂಕು ಹಂತ | ಜಿಲ್ಲಾ ಹಂತ | ರಾಜ್ಯ ಹಂತ | ರಾಷ್ಟ್ರ ಮಟ್ಟ | ಅಂತರಾಷ್ಟ್ರೀಯ ಮಟ್ಟ |
| 2016–17 | | | | | | | |
| 2017–18 | | | | | | | |
| 2018–19 | | | | | | | |
| 2019–20 | | | | | | | |
| 2020–21 | | | | | | | |

5. ನಿರ್ವಹಿಸಿದ ಇತರೆ ಜವಾಬ್ದಾರಿಗಳು

6. ಇತರೆ ವಿವರಗಳು (ಇಚ್ಛೆಸಿದಲ್ಲಿ)

## ಅರ್ಜಿ ಸಲ್ಲಿಸುವ ಪ್ರಕ್ರಿಯೆ
## ಭಾಗ–1 ವಸ್ತುನಿಷ್ಠ ಮಾನದಂಡಗಳು

1. ಕಳೆದ 3 ವರ್ಷಗಳಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರಿಯ ಮಟ್ಟದಲ್ಲಿ ಪ್ರಕಟಿಸಿದ ಸಂಶೋಧನಾ ಪ್ರಬಂಧ ಲೇಖನ, ಪುಸ್ತಕಗಳು, ಭಾಗವಹಿಸಿದ ವಿಚಾರಗೋಷ್ಠಿಗಳು ಹಾಗೂ ವಸ್ತುಪ್ರದರ್ಶನಗಳ ವಿವರ

| ಮಟ್ಟ | ವಿವರ | ಷರಾ |
|---|---|---|
| ಅಂತರಾಷ್ಟ್ರೀಯ ಮಟ್ಟ | | |
| ರಾಷ್ಟ್ರ ಮಟ್ಟ | | |
| ರಾಜ್ಯ ಮಟ್ಟ | | |
| ಜಿಲ್ಲಾ ಮಟ್ಟ | | |

2. ಸೇವಾನಿರತ ತರಬೇತಿ (ಕಳೆದ 03ವರ್ಷಗಳ ಮಾಹಿತಿ)

| ಕ್ರ ಸ | ತರಬೇತಿಯ ವಿರ | ತರಬೇತಿಯ ಅವಧಿ (>5 ದಿನಗಳು) | ಸಂಸ್ಥೆಯ ವಿವರ |
|---|---|---|---|
| | | | |
| | | | |
| | | | |
| | | | |

3. ಕಳೆದ 03 ವರ್ಷಗಳಲ್ಲಿ ಮಕ್ಕಳ ದಾಖಲಾತಿಯನ್ನು ಹೆಚ್ಚಿಸಲು ಹಾಗೂ ಮಕ್ಕಳು ಕಾಲೇಜನ್ನು ಬಿಡುವುದನ್ನು ತಡೆಗಟ್ಟಲು ಉಪನ್ಯಾಸಕರು ಕೈಗೊಂಡ ಕ್ರಮಗಳು

4. ಪಡೆದಿರುವ ಹೆಚ್ಚಿನ ವಿದ್ಯಾರ್ಹತೆ ಮತ್ತು ಅದರಿಂದ ನಿಮ್ಮ ವೃತ್ತಿಜೀವನದಲ್ಲಿ ಉಂಟಾದ ಧನಾತ್ಮಕ ಪರಿಣಾಮ

5. ಕಳೆದ 03 ವರ್ಷಗಳಲ್ಲಿ ಪಿಯು/ಡಿಎಸಿಇಆರ್‌ಟಿ/ಎಸ್‌ಎಸ್‌ಕೆ/ಕೆಟಿಬಿಎಸ್ /ಎನ್‌ಸಿಇಆರ್‌ಟಿ ಇ-ಕಂಟೆಂಟ್, ಪಠ್ಯಪುಸ್ತಕ ಶಿಕ್ಷಕರ ಕೈಪಿಡಿಗಳನ್ನು ಅಭಿವೃದ್ಧಿ ಪಡಿಸಲು ಸಕ್ರಿಯ ಭಾಗವಹಿಸುವಿಕೆ.

| | ಪಿಯು ಪುಸ್ತಕ | ಎನ್‌ಸಿಇಆರ್‌ಟಿ | ಡಿಎಸ್‌ಇಆರ್‌ಟಿ | ಎಸ್‌ಎಸ್‌ಕೆ | ಕೆಟಿಬಿಎಸ್ |
|---|---|---|---|---|---|
| ಇ–ಕಂಟೆಂಟ್ | | | | | |
| ಪಠ್ಯಪುಸ್ತಕ | | | | | |
| ಉಪನ್ಯಾಸಕರ ಕೈಪಿಡಿ | | | | | |

6. ಪ್ರಶಸ್ತಿಗೆ ಪರಿಗಣಿಸಲು ನೀಡುವ ಸಮರ್ಥನೆಗಳು (ಎರಡು ಪುಟಕ್ಕೆ ಮೀರದಂತೆ).

## ಭಾಗ–2

ಕಳೆದ ವರ್ಷಗಳಲ್ಲಿ ಉಪನ್ಯಾಸಕರು ತಮ್ಮ ಬೋಧನೆಯಲ್ಲಿ ಅತಿ ಹೆಚ್ಚು ಪ್ರಭಾವ ಬೀರಲು ಕೈಗೊಂಡ ನಾವಿನ್ಯಯುತ ಪ್ರಯೋಗಗಳು(ಉದಾ: ಐ ಸಿ ಟಿ ಬಳಕೆ, ಸಂತಸದಾಯಕ ಕಲಿಕೆಯ ತಂತ್ರಗಳು, ಪರಿಣಾಮಕಾರಿ ಬೋಧನಾ ವಿಧಾನಗಳು) ಬೋಧನಾವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಮತ್ತು ಪ್ರಚುರಪಡಿಸಿರುವುದು, ತಮ್ಮ ದೈನಂದಿನ ಬೋಧನಾ ಪ್ರಕ್ರಿಯೆಯಲ್ಲಿ ಸೂಕ್ತ ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಬೋಧನಾ ಕಲಿಕಾ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಅಭೀವೃದ್ಧಿಪಡಿಸಿರುವುದು

| ಕ್ರ ಸ | ನಾವೀನ್ಯಯುತ ಚಟುವಟಿಕೆ | ಧನಾತ್ಮಕ ಪರಿಣಾಮ |
|---|---|---|
| | | |

2(ಎ) CWSN ಮಕ್ಕಳ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಮ್ಮಿಕೊಂಡಿರುವ ವಿಶೇಷ ಚಟುವಟಿಕೆಗಳು

| ಕ್ರಸ | CWSN ಮಕ್ಕಳ ಶಿಕ್ಷಣ | | ಹೆಣ್ಣುಮಕ್ಕಳ ಶಿಕ್ಷಣ | |
|---|---|---|---|---|
| | ಚಟುವಟಿಕಗಳು | ಪರಿಣಾಮ | ಚಟುವಟಿಕೆಗಳು | ಪರಿಣಾಮ |
| | | | | |

2(ಬಿ) ಉಪನ್ಯಾಸಕರ ಮಾರ್ಗದರ್ಶನದಲ್ಲಿ ವಿವಿಧ ಹಂತದಲ್ಲಿ (ರಾಜ್ಯ/ವಿಭಾಗ/ಜಿಲ್ಲೆ/ತಾಲ್ಲೂಕು) ಆಯೋಜಿಸಿದ ವಿಶೇಷ ಹಾಗೂ ಸಹಪಠ್ಯ ಚಟುವಟಿಕೆಗಳ ವಿವರ ಮತ್ತು ಅದರ ಧನಾತ್ಮಕ ಪರಿಣಾಮ

| ಕ್ರ ಸಂ | ಚಟುವಟಿಕೆಯ ವಿವರ | ಹಂತ | ಧನಾತ್ಮಕ ಪರಿಣಾಮ |
|---|---|---|---|
| | | | |
| | | | |

3(ಎ)1 ಮಕ್ಕಳಲ್ಲಿ ಸಮಾಜಿಕ ಪ್ರಜ್ಞೆ, ವೃತ್ತಿ ಮಾರ್ಗದರ್ಶನ, ವ್ಯಕ್ತಿತ್ವ ನಿರ್ಮಾಣದಲ್ಲಿ ಸಮುದಾಯದ ಸಹಭಾಗಿತ್ವ (ಉಪನ್ಯಾಸಕರಿಂದ ಪ್ರೇರೇಪಿತ)

3(ಎ)2 ಕಾಲೇಜು ಭೌತಿಕ ಸೌಲಭ್ಯಗಳನ್ನು ಉತ್ತಮ ಪಡಿಸಲು ಸಮುದಾಯವನ್ನು ತೊಡಗಿಸಿಕೊಂಡಿರುವುದು (ಉಪನ್ಯಾಸಕರಿಂದ ಪ್ರೇರೇಪಿತ)

| ಕ್ರ ಸಂ | ಭೌತಿಕ ಸೌಲಭ್ಯದ ವಿವರ | ಸಂಸ್ಥೆ/ದಾನಿಗಳ ವಿವರ | ಅಂದಾಜು ಮೌಲ್ಯ |
|---|---|---|---|
| 1 | ಪೀಠೋಪಕರಣ | | |
| 2 | ಕೊಠಡಿ ನಿರ್ಮಾಣ | | |
| 3 | ಪ್ರಯೋಗಾಲಯಗಳ ಉನ್ನತಿಕರಣ | | |
| 4 | ಗ್ರಂಥಾಲಯಕ್ಕೆ ಪುಸ್ತಕಗಳ ಸಂಗ್ರಹ | | |
| 5 | ಇತರೆ ಅಭಿವೃದ್ಧಿ ಸೌಕರ್ಯಗಳು | | |

3(ಬಿ) ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಪ್ರೇರೇಪಿಸಲು ಕೈಗೊಂಡ ವಿಶಿಷ್ಟ ಕ್ರಮಗಳು

| ಕ್ರ ಸ | ಕ್ರಮದ ವಿವರ | ಧನಾತ್ಮಕ ಪರಿಣಾಮ |
|---|---|---|
| | | |

## ಕಾಲೇಜಿನ ಮುಖ್ಯಸ್ಥರ ದೃಢೀಕರಣ

ಶ್ರೀ/ಶ್ರೀಮತಿ_______________________________________ಈ ಕಾಲೇಜಿನಲ್ಲಿ/ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ಎಲ್ಲಾ ವಿವರಗಳು ಸರಿಯಾಗಿರುತ್ತವೆಂದು ದೃಢೀಕರಿಸಿದೆ.

ಪ್ರಾಚಾರ್ಯರ/ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು

## ಜಿಲ್ಲಾ ಸಮಿತಿ ದೃಢೀಕರಣ

ಶ್ರೀ/ಶೀಮತಿ _______________________________ ರವರು ಸರ್ಕಾರಿ/ಅನುದಾನಿತ ಪದವಿ ಪೂರ್ವ ಕಾಲೇಜಿನಲ್ಲಿ _________________ ಪ್ರಾಚಾರ್ಯರು/ಉಪನ್ಯಾಸಕರಾಗಿದ್ದು _________________________ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರು ಉತ್ತಮ ಪ್ರಾಚಾರ್ಯರು/ ಉಪನ್ಯಾಸಕರ ಪ್ರಶಸ್ತಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದೆ ಹಾಗೂ ಸರಿಯಾಗಿವೆ ಎಂದು ದೃಢೀಕರಿಸಿದೆ. ಮತ್ತು ಪ್ರಶಸ್ತಿಗಾಗಿ ಶಿಫಾರಸ್ಸು ಮಾಡಿದೆ.

ಸ್ಥಳ:

ದಿನಾಂಕ:

ಅಧ್ಯಕ್ಷರು

____________ ಜಿಲ್ಲಾ ಸಮಿತಿ

## ಭಾಗ2 ಕಾರ್ಯಕ್ಷಮತೆ ಆಧಾರಿತ ಮಾನದಂಡಗಳು

| ಕ್ರ ಸಂ | ಕಾರ್ಯಕ್ಷಮತೆ ಆಧಾರಿತ ಮಾನದಂಡಗಳು | ನಿಗದಿ ಪಡಿಸಿರುವ ಅಂಕಗಳು | ನೀಡಿದ ಅಂಕಗಳು | ಶ್ರೇಣಿ |
|---|---|---|---|---|
| 01 | ಕಳೆದ 03 ವರ್ಷಗಳ ಉಪನ್ಯಾಸಕರು ತಮ್ಮ ಬೋಧನೆಯಲ್ಲಿ ಅತಿ ಹೆಚ್ಚು ಪ್ರಭಾವಬೀರಲು ಕೈಗೊಂಡ ನಾವಿನ್ಯಯುತ ಪ್ರಯೋಗಗಳು (ಉದಾ ಐ.ಸಿ.ಟಿ ಬಳಕೆ ಸಂತಸದಾಯಕ ಕಲಿಕೆಯ ತಂತ್ರಗಳು, ಪರಿಣಾಮಕಾರಿ ಬೋಧನಾ ವಿಧಾನಗಳು) ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಮತ್ತು ಪ್ರಚುರಪಡಿಸಿರುವುದು ತಮ್ಮ ದೈನಂದಿನ ಬೋಧನಾ ಪ್ರಕ್ರಿಯೆಯಲ್ಲಿ ಸೂಕ್ತ ಬೋಧನಾ ವಿಧಾನಗಳನ್ನು ಅಭಿವೃದ್ಧಿ ಪಡಿಸಿರುವುದು ಬೋಧನಾ ಕಲಿಕಾ ಸಾಮಗ್ರಿಗಳನ್ನು ಕಡಿಮೆ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಿರುವುದು | 10 | | |
| 02ಎ | CWSN ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಮ್ಮಿಕೊಂಡಿರುವ ವಿಶೇಷ ಚಟುವಟಿಕೆಗಳು (ಪ್ರಾಂಶುಪಾಲರು/ಉಪನ್ಯಾಸಕರು) | 10 | | |
| 02 ಬಿ | ಉಪನ್ಯಾಸಕರ ಮಾರ್ಗದಶದಲ್ಲಿ ವಿವಿಧ ಹಂತದಲ್ಲಿ ವಿದ್ಯಾರ್ಥಿಗಳಿಗೆ (ರಾಜ್ಯ/ವಿಭಾಗ ಜಿಲ್ಲೆ, ತಾಲ್ಲೂಕು ) ಆಯೋಜಿಸಿದ ವಿಶೇಷ ಹಾಗೂ ಸಹಪಠ್ಯ ಚಟುವಟಿಕಗಳ ವಿವರ ಮತ್ತು ಅದರ ಧನಾತ್ಮಕ ಪರಿಣಾಮ | 10 | | |
| 03 ಎ(1) | ವಿದ್ಯಾರ್ಥಿಗಳಲ್ಲಿ ಸಮಾಜಿಕ ಪ್ರಜ್ಞೆ ವೃತ್ತಿ ಮಾರ್ಗದರ್ಶನ ವ್ಯಕ್ತಿತ್ವ ನಿರ್ಮಾಣದಲ್ಲಿ ಸಮುದಾಯದ ಸಹಭಾಗಿತ್ವ (ಪ್ರಾಂಶುಪಾಲರು/ಉಪನ್ಯಾಸಕರಿಂದ ಪ್ರೇರೆಪಿತ) | 5 | | |
| 03 ಎ(2) | ಕಾಲೇಜಿನ ಭೌತಿಕ ಸೌಲಭ್ಯಗಳನ್ನು ಉತ್ತಮ ಪಡಿಸಲು ಸಮುದಾಯವನ್ನು ತೊಡಗಿಸಿಕೊಂಡಿರುವುದು (ಪ್ರಾಂಶುಪಾಲರು/ಉಪನ್ಯಾಸಕರಿಂದ ಪ್ರೇರೆಪಿತ) | 10 | | |
| 03 ಬಿ | ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಪ್ರೇರೇಪಿಸಲು ಕೈಗೊಂಡ ವಿಶಿಷ್ಟ ಕ್ರಮಗಳು (ಪ್ರಾಂಶುಪಾಲರು/ಉಪನ್ಯಾಸಕರು) | 5 | | |
| | ಒಟ್ಟು | 50 | | |

ಅನುಬಂಧ–2

## ಜಿಲ್ಲಾಹಂತ
## ಮೌಲ್ಯಮಾಪನ

### ಭಾಗ–1 ವಸ್ತುನಿಷ್ಠ ಮಾನದಂಡಗಳು

| ಕ್ರಸ | ವಸ್ತುನಿಷ್ಠ ಮಾನದಂಡಗಳು | ನಿಗದಿಪಡಿಸಿದ ಅಂಕಗಳು | ನೀಡಿದ ಅಂಕಗಳು | ಶ್ರೇಣಿ |
|---|---|---|---|---|
| 1 | ಕಳೆದ 03 ವರ್ಷಗಳಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಕಟಿಸಿದ ಸಂಶೋಧನಾ ಪ್ರಬಂಧ, ಲೇಖನ, ವಸ್ತುಪ್ರದರ್ಶನದ ವಿವರ | 10 | | |
| 2 | ಕಳೆದ 03 ವರ್ಷಗಳ ಕಾರ್ಯನಿರ್ವಹಣಾ ವರದಿ | 5 | | |
| 3 | ಯಾವುದೇ ದೂರು ಇಲ್ಲದೇ ಉಪನ್ಯಾಸಕರು ನಿಯಮಿತವಾಗಿ ಕಾಲೇಜುಗಳಿಗೆ ಹಾಜರಾಗುತ್ತಿದ್ದಾರೆಯೇ | 5 | | |
| 4 | ಕಳೆದ 03 ವರ್ಷಗಳಲ್ಲಿ ಸೇವಾನಿರತ ತರಬೇತಿ, ಹಾಜರಾತಿ, ಸಕ್ರಿಯ ಭಾಗವಹಿಸುವಿಕೆ, ಕಾಲೇಜು ಪ್ರಕ್ರಿಯೆಯಲ್ಲಿ ಅಳವಡಿಸುವಿಕೆ | 10 | | |
| 5 | ಕಳೆದ 03 ವರ್ಷಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸಲು ಹಾಗೂ ವಿದ್ಯಾರ್ಥಿಗಳು ಕಾಲೇಜು ಬಿಡುವುದನ್ನು ತಡೆಗಟ್ಟಲು ಉಪನ್ಯಾಸಕರು ಕೈಗೊಂಡ ಕ್ರಮಗಳು | 5 | | |
| 6 | ಪಡೆದಿರುವ ಹೆಚ್ಚಿನ ವಿದ್ಯಾರ್ಹತೆ ಮತ್ತು ಅದರಿಂದ ನಿಮ್ಮ ವೃತ್ತಿಜೀವನದಲ್ಲಿ ಉಂಟಾದ ಧನಾತ್ಮಕ ಪರಿಣಾಮ | 5 | | |
| 7 | ಕಳೆದ 03 ವರ್ಷಗಳಲ್ಲಿ ಇ–ಕಂಟೆಂಟ್, ಪಠ್ಯಪುಸ್ತಕ, ಉಪನ್ಯಾಸಕರ ಕೈಪಿಡಿಗಳನ್ನು ಅಭಿವೃದ್ಧಿ ಪಡಿಸಲು ಸಕ್ರಿಯ ಭಾಗವಹಿಸುವಿಕೆ | 10 | | |
| | ಒಟ್ಟು | 50 | | |

## ಆಯ್ಕೆ ಸಮಿತಿಯ ಸಭೆಯ ನಡವಳಿ(100 ಶಬ್ದಗಳಲ್ಲಿ ವರದಿ)

| |
|---|
| |

### ಐದು ಅಂಕಗಳ ದರ್ಜಾ ಮಾಪನ

| ದರ್ಜೆ | ಶ್ರೇಣಿ | ಅಂಕಗಳು |
|---|---|---|
| ಅಸಾಧಾರಣ | ಎ | 5 |
| ಅತ್ಯುತ್ತಮ | ಬಿ | 4 |
| ಉತ್ತಮ | ಸಿ | 3 |
| ಸಾಧಾರಣ | ಡಿ | 2 |
| ಸಾಧಾರಣಕ್ಕಿಂತ ಕಡಿಮೆ | ಇ | 1 |